ಪತ್ರಿಕೆ : NAME OF THE NEWS PAPER
ಇಲಾಖೆ / DEPARTMENT / SUBJECT
ದಿನಾಂಕ : DATE

# ನಿನ್ನೆ 51 ಕೇಸ್: ರಾಜ್ಯಕ್ಕೆ ಮಹಾ ಕಂಟಕ

ಕ.ಪ್ರ 21/5/20

## ನಿನ್ನೆ ರಾಜ್ಯದಲ್ಲಿ 69 ಜನರಿಗೆ ಕೊರೋನಾ ಸೋಂಕು | ಇವರಲ್ಲಿ 51 ಜನ ಮಹಾರಾಷ್ಟ್ರದಿಂದ ಬಂದವರು

## ಬೆಂಗಳೂರಿನಲ್ಲಿ ಒಬ್ಬ ಸಾವು: ಮೃತರ ಸಂಖ್ಯೆ 41 | ಹಾಸನದಲ್ಲಿ 21, ಬೀದರ್‌ನಲ್ಲಿ 10 ಮಂದಿಗೆ ಸೋಂಕು

ಬೆಂಗಳೂರು: ರಾಜ್ಯದಲ್ಲಿ ಸತತ ಎರಡು ದಿನ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಫೋಟಗೊಂಡು ಆತಂಕ ಹೆಚ್ಚಿಸಿದ್ದ ಕೊರೋನಾ ಸೋಂಕು ಬುಧವಾರ ಕೊಂಚ ಕಡಿಮೆಯಾಗಿದ್ದು, 69 ಜನರಿಗೆ ಮಾತ್ರ ಸೋಂಕು ದೃಢಪಟ್ಟಿದೆ. ಇದರಿಂದ ಒಟ್ಟು ಸೋಂಕಿತರ ಸಂಖ್ಯೆ 1464ಕ್ಕೆ ಏರಿಕೆಯಾಗಿದೆ.

ಹೊಸ 69 ಪ್ರಕರಣಗಳ ಪೈಕಿ 51 ಜನರು ಮಹಾರಾಷ್ಟ್ರ ಪ್ರವಾಸದ ಹಿನ್ನೆಲೆಯುಳ್ಳವರಾಗಿದ್ದು, ಇದರೊಂದಿಗೆ ಕಳೆದ ಶನಿವಾರದಿಂದ ಬುಧವಾರದವರೆಗೆ (ಐದೇ ದಿನದಲ್ಲಿ) ಮಹಾರಾಷ್ಟ್ರದಿಂದ ವಾಪಸಾದ ಒಟ್ಟು 234 ಜನರಿಗೆ ಸೋಂಕು ದೃಢಪಟ್ಟಂತಾಗಿದೆ.

ಈ ಮಧ್ಯೆ, ಬೆಂಗಳೂರಿನಲ್ಲಿ 43 ವರ್ಷದ ಕೊರೋನಾ ಸೋಂಕಿತ ವ್ಯಕ್ತಿಯೊಬ್ಬರು ಬುಧವಾರ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಮೃತಪಟ್ಟರ ಸಂಖ್ಯೆ 41ಕ್ಕೇರಿದೆ. ಬೆಂಗಳೂರು ನಿವಾಸಿಯಾದ ಪಿ.1236 ಸಂಖ್ಯೆಯ ವ್ಯಕ್ತಿ ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಯಿಂದಾಗಿ ಮೇ 18ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಬಳಿಕ ನಡೆಸಲಾದ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿತ್ತು, ಚಿಕಿತ್ಸೆ ಫಲಿಸದೆ ಅವರು ಬುಧವಾರ ನಿಧನರಾದರು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

**ಜಿಲ್ಲಾವಾರು ಪ್ರಕರಣ:** ಬುಧವಾರದ ಹೊಸ 69 ಪ್ರಕರಣಗಳಲ್ಲಿ ಹಾಸನದ 21, ಬೀದರ್ 10, ಮಂಡ್ಯ 8, ಕಲಬುರಗಿ 7, ಉಡುಪಿ, ಬೆಂಗಳೂರು ತಲಾ 6, ತುಮಕೂರು, ರಾಯಚೂರು ತಲಾ 4, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಯಾದಗಿರಿಯಲ್ಲಿ ತಲಾ ಒಂದೊಂದು ಪ್ರಕರಣ ಸೇರಿವೆ. ಈ ಪೈಕಿ ಹಾಸನದ 20, ತುಮಕೂರು, ರಾಯಚೂರಿನ ತಲಾ ನಾಲ್ವರು, ಉಡುಪಿಯ 6, ಕಲಬುರಗಿಯ 7, ಮಂಡ್ಯದ 8 ಜನ, ಉತ್ತರ ಕನ್ನಡ, ಯಾದಗಿರಿಯ ತಲಾ ಒಬ್ಬರು ಸೇರಿ ಒಟ್ಟು 52 ಮಂದಿ ಮಹಾರಾಷ್ಟ್ರದಿಂದ ಹಿಂತಿರುಗಿದವರು.

ಉಳಿದಂತೆ ಆಂಧ್ರಪ್ರದೇಶದಿಂದ ಬಂದ ಮಂಡ್ಯದ ಒಬ್ಬರಿಗೆ, ಬೀದರ್ ಜಿಲ್ಲೆಯಲ್ಲಿ ಪಿ.943 ಸೋಂಕಿತನಿಂದ ಮೂವರಿಗೆ, ಪಿ.1041 ಮತ್ತು ಪಿ.981 ಸೋಂಕಿತರಿಂದ ತಲಾ ಒಬ್ಬರಿಗೆ, ಪಿ.772, ಪಿ.684 ಮತ್ತು ಪಿ.590 ಸೋಂಕಿತರಿಂದ ತಲಾ ಒಬ್ಬರಿಗೆ ಸೋಂಕು ಹರಡಿದೆ. ಬೆಂಗಳೂರಿನಲ್ಲಿ ನಾಲ್ಕು ಪ್ರಕರಣದಲ್ಲಿ ಪಿ.701 ರೋಗಿಯಿಂದ ಇಬ್ಬರಿಗೆ ಸೋಂಕು ದೃಢಪಟ್ಟಿದ್ದು, ಮತ್ತಿಬ್ಬರ ಸೋಂಕಿಗೆ ಕಾರಣ ಪತ್ತೆಯಾಗಿಲ್ಲ. ದಕ್ಷಿಣ ಕನ್ನಡದಲ್ಲಿ ತೀವ್ರ ಉಸಿರಾಟ ತೊಂದರೆಯ ಒಬ್ಬರಿಗೆ ಸೋಂಕು ತಗುಲಿದೆ.

**13 ಜನ ಡಿಸ್ಚಾರ್ಜ್:** ಬುಧವಾರ ದಾವಣಗೆರೆಯಲ್ಲಿ ಏಳು ಜನ, ಮಂಡ್ಯದಲ್ಲಿ ಮೂರು, ಧಾರವಾಡದ ಇಬ್ಬರು, ಬೆಂಗಳೂರಿನ ಒಬ್ಬರು ಸೇರಿ ಸೋಂಕಿನಿಂದ ಗುಣಮುಖರಾದ ಒಟ್ಟು 13 ಜನರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಇದರಿಂದ ಆಸ್ಪತ್ರೆಯಿಂದ ಬಿಡುಗಡೆಯಾದವರ ಒಟ್ಟು ಸಂಖ್ಯೆ 556ರಷ್ಟಾಗಿದೆ. ಉಳಿದ 864 ಸಕ್ರಿಯ ಸೋಂಕಿತರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರೆಗೆ 41 ಜನ ಮೃತಪಟ್ಟಿದ್ದಾರೆ (1 ಕೋವಿಡೇತರ ಹೊರತುಪಡಿಸಿ).

**12 ಮಕ್ಕಳಿಗೆ ಸೋಂಕು:** ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಸೋಂಕು ತಗಲುತ್ತಿರುವ ಪ್ರಕರಣ ಹೆಚ್ಚಾಗುತ್ತಿದೆ. ಬುಧವಾರ 15 ವರ್ಷದೊಳಗಿನ 12 ಮಕ್ಕಳಿಗೆ ಸೋಂಕು ತಗಲಿದೆ. ಇದರಿಂದ ರಾಜ್ಯದಲ್ಲಿ ಒಟ್ಟು 181 ಮಕ್ಕಳಿಗೆ ಸೋಂಕು ದೃಢಪಟ್ಟಂತಾಗಿದೆ. ಸೋಮವಾರ 19 ಮಕ್ಕಳಿಗೆ, ಮಂಗಳವಾರ 26 ಮಕ್ಕಳಿಗೆ ಸೋಂಕು ಹರಡಿತ್ತು.

### ಲಾಕ್‌ಡೌನ್ ಸಡಿಲಿಕೆ ಬಳಿಕ ಸೋಂಕು ಡಬಲ್!

ಬೆಂಗಳೂರು: ರಾಜ್ಯದಲ್ಲಿ 3ನೇ ಲಾಕ್‌ಡೌನ್ ಆರಂಭಗೊಂಡ ಮೇ 4ರಿಂದ ಈವರೆಗಿನ ಹದಿನೈದು ದಿನಗಳಲ್ಲಿ ಸೋಂಕಿತರ ಸಂಖ್ಯೆ ದುಪ್ಪಟ್ಟಾಗಿದೆ. ಮೇ 3ರಂದು ಕೇವಲ 635 ಇದ್ದ ಸೋಂಕಿತರ ಸಂಖ್ಯೆ ಮೇ 20ಕ್ಕೆ 1462ಕ್ಕೆ ಏರಿಕೆಯಾಗಿದೆ. ಅಂದರೆ, ಮೂರನೇ ಲಾಕ್‌ಡೌನ್ ಆರಂಭಗೊಂಡ ನಂತರದ 15 ದಿನಗಳಲ್ಲಿ ಒಟ್ಟು 827 ಪ್ರಕರಣಗಳು ದೃಢಪಟ್ಟಿವೆ. ಮೇ 4ರಿಂದ ಒಂದು ವಾರದಲ್ಲಿ 213 ಪ್ರಕರಣಗಳು ದೃಢಪಟ್ಟರೆ, ಆ ನಂತರದ 10 ದಿನಗಳಲ್ಲಿ 614 ಪ್ರಕರಣಗಳು ವರದಿಯಾಗಿವೆ. ಇನ್ನು ಮೇ 14ರಿಂದ ಮೇ 20ರೊಳಗೆ 450 ಪ್ರಕರಣಗಳು ದಾಖಲಾಗಿವೆ. ಈ ಅವಧಿಯಲ್ಲಿನ ಸೋಂಕಿತರ ಪೈಕಿ 270 ಜನ ಮಹಾರಾಷ್ಟ್ರದಿಂದ, 54 ಜನ ಗುಜರಾತ್‌ನಿಂದ, 30 ಜನ ರಾಜಸ್ಥಾನದಿಂದ ಮತ್ತು 20 ಮಂದಿ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಸೇರಿ ಇತರೆ ಕೆಲ ರಾಜ್ಯಗಳಿಂದ ಬಂದವರಾಗಿದ್ದಾರೆ.



### ಕೆ.ಆರ್.ಪೇಟೇಲಿ 113 ಕೇಸ್: ತಾಲೂಕು ಒಂದರಲ್ಲಿ ಗರಿಷ್ಠ!

ಮಂಡ್ಯ: ಮಂಡ್ಯದಲ್ಲೀಗ ಮಹಾರಾಷ್ಟ್ರದಿಂದ ವಾಪಸಾದವರಿಂದಾಗಿ ದಿನೇದಿನೆ ಸೋಂಕಿತರ ಸಂಖ್ಯೆ ಹೆಚ್ಚುತ್ತಲೇ ಇದ್ದು, ಈಗಾಗಲೇ ಜಿಲ್ಲೆಯಲ್ಲಿ ಪಾಸಿಟಿವ್ ಪ್ರಕರಣಗಳ ಸಂಖ್ಯೆ 168ಕ್ಕೇರಿದೆ. ಕೆ.ಆರ್.ಪೇಟೆ ತಾಲೂಕೊಂದರಲ್ಲೇ 113 ಮಂದಿ ಸೋಂಕಿತರಿದ್ದಾರೆ. ಇವರಲ್ಲಿ ಬಹುತೇಕರು ಮುಂಬೈ ಮೂಲದವರು. ಈಗಾಗಲೇ ಮಹಾರಾಷ್ಟ್ರದಿಂದ ಸಾಕಷ್ಟು ಮಂದಿ ಜಿಲ್ಲೆಗೆ ವಾಪಸಾಗಿರುವುದು ಮತ್ತು ವಾಪಸ್ ಬರುತ್ತಿರುವ ಹಿನ್ನೆಲೆಯಲ್ಲಿ ಸೋಂಕಿತರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ. ಬುಧವಾರ ಒಂದೇ ದಿನ 8 ಮಂದಿಗೆ ಸೋಂಕು ಪತ್ತೆಯಾಗಿದ್ದು, ಇವರು ಕೂಡ ಮುಂಬೈನಿಂದ ವಾಪಸಾದವರೇ ಆಗಿದ್ದಾರೆ.